ಕೂಡ ಮೊನ್ನೆ ದಿವಸ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದೇವೆ. ಮಾನ್ಯ ರಾಜನಾಥಸಿಂಗ್‌ರವರಿಗೂ ಕೂಡ ಭೇಟಿಯಾಗಿ ಕೊಟ್ಟಿರುತ್ತೇವೆ. ತತ್‌ಕ್ಷಣ ನಮ್ಮ ರಾಜ್ಯಕ್ಕೆ 9.99 ಲಕ್ಷ ಮೆಟ್ರಿಕ್ ಟನ್ ಕಾಳು ಕೇಳಿದ್ದೇವೆ, 1888 ಕೋಟಿ ರೂ. ಹಣ ಕೇಳಿರುತ್ತೇವೆ. ಅದರಲ್ಲಿ ನೀವು 1:3 ಭಾಗವಾದರೂ ಕೊಟ್ಟು ನಮ್ಮ ರಾಜ್ಯದಲ್ಲಿರತಕ್ಕಂಥ ಬರದ ಪರಿಸ್ಥಿತಿಗೆ ಅನುಕೂಲ ಮಾಡಿಕೊಡಿ ಎಂದು ಕೇಳಿಕೊಂಡಿದ್ದೇವೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಉಪಾಧ್ಯಕ್ಷರೆ, ಪರಿಹಾರವನ್ನು ಎಷ್ಟು ಕೊಟ್ಟಿದ್ದೇವೆಂದು ಹೇಳುವುದಕ್ಕೆ ತಯಾರಿಲ್ಲ. ಇವರು ರೈತ ವಿರೋಧಿ ಧೋರಣೆಯನ್ನು ಮಾಡುತ್ತಿದ್ದಾರೆ. ಪರಿಹಾರವನ್ನು ಕೊಡುವುದಕ್ಕೂ ಇವರು ತಯಾರಿಲ್ಲ. ಇಲ್ಲಿಯವರೆಗೂ ಅದು ಎನ್‌ಕ್ವೈರಿ ಆಗಲಿಲ್ಲ. ಆ ನ್ಯಾಯಾಂಗ ತನಿಖೆ ಬಗ್ಗೆಯೂ ಹೇಳಲಿಲ್ಲ. ರೈತ ವಿರೋಧಿ ಧೋರಣೆಯನ್ನು ನಾವು ಪ್ರೋಟೆಸ್ಟ್ ಮಾಡಿ ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಬಿಜೆಪಿ ಹಗೂ ಜನತಾದಳ ಸಂಯುಕ್ತ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ :– ಮಾನ್ಯ ಉಪಾಧ್ಯಕ್ಷರೆ, ನಾನು ಇರತಕ್ಕಂಥ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಇವತ್ತು ಇಡೀ ಜನತೆಗೆ ನಾವು ಮನವಿಯನ್ನು ಮಾಡಿಕೊಂಡಿದ್ದೇವೆ. ಇವತ್ತು ಈ ಸದನದ ಮುಖಾಂತರ ಮುಂದಿನ ದಿನಗಳಲ್ಲಿ ಯಾವುದೇ ಕಾರಣಕ್ಕೂ ನಮ್ಮ ರಾಜ್ಯದ ಜನತೆ ಈ ರೀತಿಯಾದ ಆತ್ಮಹತ್ಯೆಯನ್ನು ಮಾಡಿಕೊಳ್ಳಕೂಡದೆಂದು ಹೇಳಿ, ನಾನು ಜನತೆಯಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಜನರು ಹಸಿವಿನಿಂದ ಸತ್ತಿದ್ದಾರೆನ್ನುವುದು ಸತ್ಯಕ್ಕೆ ದೂರವಾದಂಥ ಮಾತು. ನಮ್ಮ ರಾಜ್ಯದಲ್ಲಿ ಇಲ್ಲಿಯವರೆಗೆ ಯಾರೂ ಹಸಿವಿನಿಂದ ಸತ್ತಿಲ್ಲ, ಸಾಯುವುದಕ್ಕೂ ಅವಕಾಶವಿಲ್ಲವೆಂದು ನಾನು ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ :– ಮಾನ್ಯ ಉಪಾಧ್ಯಕ್ಷರೆ, ನಾನು ಎರಡು ಪ್ರಮುಖವಾಗಿರತಕ್ಕಂಥ ವಿಚಾರಗಳನ್ನು ಪ್ರಸ್ತಾಪ ಮಾಡಿರುತ್ತೇನೆ. ಅದಕ್ಕೆ ನಾನು ಮಾನ್ಯ ಮಂತ್ರಿಗಳಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ನೀವು ರಾಜ್ಯದ ಎಲ್ಲಾ ಕಡೆಗಳಲ್ಲಿ ಬಡತನ ರೇಖೆಯ ಕೆಳಗಿರುವವರಿಗೆ ಕೇಂದ್ರ ಸರ್ಕಾರದ ಸಹಾಯದಿಂದ ಹಳದಿ ಕರ್ಡ್‌ನ್ನು ಕೊಟ್ಟಿದ್ದೀರಿ ಸ್ವಾಮಿ. ನಮ್ಮ ಕಡೆ ಹಳದಿ ಕಾರ್ಡ್ ಎಂದು ಕರೆಯುತ್ತಾರೆ. ನಿಮ್ಮ ಗುಲ್ಬರ್ಗಾ ಕಡೆ ಏನೆಂದು ಕರೆಯುತ್ತಾರೆ ನನಗೆ ಗೊತ್ತಿಲ್ಲ. ಇವರು ಹೇಳುವ ಪ್ರಕಾರವೇ 121 ತಾಲ್ಲೂಕುಗಳಲ್ಲಿ ಬರಗಾಲ ಇದೆ.ನೀವು ಈಗ 5 ಅಥವಾ 10 ಕೆಜಿ. ಅಕ್ಕಿಯನ್ನು ಕೊಡುತ್ತಿದ್ದೀರಿ ಅದನ್ನು ಕನಿಷ್ಟ ಪಕ್ಷ ಒಂದು ತಿಂಗಳಿಗೆ 35 ಕೆಜಿ ಅಕ್ಕಿಯನ್ನು ಕೊಡುವುದಕ್ಕೆ ಸಾಧ್ಯವೇ? ಹಳದಿ ಕಾರ್ಡುಗಳ ಎಷ್ಟು ಇವೆ? ಇಡೀ ರಾಜ್ಯದಲ್ಲಿ 4 ಅಥವಾ 5 ಲಕ್ಷ ಇರಬಹುದು. ತಮಗೆ ಗೊತ್ತಿರುವ ಹಾಗೆ ಈ ಹಳದಿ ಕಾರ್ಡ್‌ಗಳ ಸಂಖ್ಯೆಯ ಬಗ್ಗೆ ಬಹಳ ಡಿಸ್‌ಪ್ಯೂಟ್ ಇದೆ. ಇರತಕ್ಕಂಥದ್ದು ಎರಡೂವರೆ ಲಕ್ಷ ಆದ್ದರಿಂದ ಸರ್ಕಾರಕ್ಕೆ ಅಕ್ಕಿಯನ್ನು ಜಾಸ್ತಿ ಮಾಡುವುದಕ್ಕೆ ಏನು ತೊಂದರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ, ಇವರು ಹಸಿವಿನಿಂದ ಸತ್ತಿದ್ದಾರೆಂದು ಹೇಳುತ್ತಿದ್ದಾರೆ. ಹಸಿವು ಆದರೆ ಪಕ್ಕದ ಮನೆಯಿಂದ ಹಸಿ ಹಿಟ್ಟನ್ನಾದರೂ ತಂದು ಗಂಜಿ ಮಾಡಿಕೊಂಡು ಕುಡಿಯುತ್ತಾರೆ. ಮಾನ್ಯ ಏರ್ಗೆಯವರು ಹೇಳಿರತಕ್ಕಂಥ ವಿಚಾರವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆವತ್ತಿನ ದಿವಸ ಹಸಿವಿನಿಂದ ಸಾಯದೆ ಇರಬಹುದು, ಓವರ್ ದಿ ಟೈಮ್, ಆ ಬಡತನ ಹಸಿವು, ಸಾಲ, ಹಿಂಸೆ, ಚಿತ್ರಹಿಂಸೆ ಇದರಿಂದ ಸತ್ತಿರುತ್ತಾರೆ, ಇದಕ್ಕೆ ಕೊಡುವುದಕ್ಕೆ ತೊಂದರೆ ಏನು? ನನಗೆ